ಮಹಿಳೆಗೆ ತನ್ನದೆನ್ನುವ ಯಾವ ಭದ್ರತೆಯೂ ಇಲ್ಲದ ಸಾಮಾಜಿಕತೆಯಲ್ಲಿ ಇದೆಲ್ಲ ತನ್ನದೇ ಎಂದು ಭಾವಿಸಿ ಬದುಕಬೇಕಾದ ಸ್ಥಿತಿಯನ್ನು ಇವು ತೆರೆದು ತೋರುತ್ತವೆ.

ಬೆಚ್ಚಗಿದ್ದವರಿಗೂ, ಬೆಚ್ಚಗಿಲ್ಲದವರಿಗೂ ಸ್ಪೇಸ್ ಅನ್ನುವುದು ಭ್ರಮೆ ಮಾತ್ರ. ನಿರಂತರ ತನ್ನದಾಗಿಸಿಕೊಳ್ಳುವ ಹೋರಾಟ, ಅಸ್ತಿತ್ವ ರೂಪಿಸಿಕೊಳ್ಳಲು ನಿತ್ಯ ನಡೆಸುವುದು ಅನಿವಾರ್ಯವಾಗಿದೆ. ಪ್ರೇಮ-ಕಾಮಗಳು ಇದರಿಂದ ಹೊರತಲ್ಲ. ಗಂಡಿನ ಜಗತ್ತಿಗಿಂತ ಭಿನ್ನ ಮತ್ತು ಬೇರೆಯ ಸ್ವರೂಪ ಮಹಿಳೆಯರ ವಿಷಯಗಳಿಗಿವೆ. ಹೆಂಡತಿಯಾಗಲಿ, ಪ್ರೇಯಸಿಯಾಗಲಿ ತನ್ನ ಒಡವೆಯಂತೆ ಕಾಣುವ ಮನಸ್ಸು ಪಿತೃಪ್ರಧಾನ ಅಧಿಕಾರ ಕೇಂದ್ರಿತ ನೆಲೆಯಿಂದಾಗಿ ತನಗೆ ತಾನೆ ರೂಪುಗೊಳ್ಳುತ್ತದೆ. ಇದು ಮಹಿಳೆಯರಿಗೆ ಸಾಧ್ಯವಾಗುವುದಿಲ್ಲ. ಹಾಗೆಂದು ಮಹಿಳೆ ಪಿತೃಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಅವಳಲ್ಲೂ ಅಂತಹದೇ ಅಧಿಕಾರ ಕೇಂದ್ರಿತ ನೆಲೆಯಾಗಿ ಸ್ಥಾಪಿತವಾಗುತ್ತದೆ. ಕಥೆಗಾರ್ತಿ ಹೇಳುವಂತೆ 'ಕರುಣೆಯೆಂದೂ ಒಲವಾಗಲೊಲ್ಲದು'. ಇದು ಲಿಂಗ, ಜಾತಿ ಮತ್ತು ವರ್ಗದ ಕೇಂದ್ರವಾಗಿ ಸ್ಥಾಪಿತ ಮೌಲ್ಯಗಳ ನೆಲೆಯಲ್ಲಿ ಮಾನ್ಯವಾಗುತ್ತದೆ. 'ಪದುಮ ಪುರುಷ'ದ ಕಥೆಗಳು ಇಂತಹ ಸಂಕೀರ್ಣ ಭಾವಗಳನ್ನು ಓದುಗರಿಗೆ ಸರಳವಾಗಿ ಹಾಗೂ ಮೌಲಿಕವಾಗಿ ದಾಟಿಸುತ್ತವೆ.

ಮಹಿಳೆಯರ ವಿಷಯಗಳನ್ನು ಖಾಸಗಿಯಾಗಿಸುವ ಮೂಲಕ ಅವರನ್ನು ನಿಯಂತ್ರಿಸಲು ಹಿಂಸೆಯನ್ನು ಅಸ್ತ್ರವಾಗಿ ಬಳಸಲಾಗುತ್ತಿದೆ. ಇದಕ್ಕೆ 'ಮಾವಿನ ಮರದ ನೆರಳಲ್ಲಿ' ಕಥೆಯ ಸಂಯುಕ್ತಾ ಒಳ್ಳೆಯ ಉದಾಹರಣೆ. ಸಂಯುಕ್ತಾಳ ಸಮಸ್ಯೆಗೆ ಕಿವಿಯಾಗುವ ಮನೆಯ ಒಡತಿ ಗೀತಾ. ಗೀತಾಳಿಗೆ ಆಕೆಯ ಗಂಡ ಹೇಳುವ ಮಾತು ಮಹಿಳೆಯರ ಸಮಸ್ಯೆ ಸಾಮಾಜಿಕವಲ್ಲ ಎಂಬುದನ್ನು ತಿಳಿಸುತ್ತದೆ. "ಕೆಲಸದಿಂದಾಚೆಗೆ ಅವರುಗಳನ್ನು ಎಂಟರ್‌ಟೈನ್ ಮಾಡಬೇಡ ನೀನು. ಅವರ ಪಂಚಾಯ್ತಿಗೆ ತಲೆ ಕೆಡುತ್ತೆ. ಸಣ್ಣಪುಟ್ಟ ಸಹಾಯ ಮಾಡು, ಬೇಡ ಅಂದವರು ಯಾರು? ಆದ್ರೆ, ಅದರ ತಲೆನೋವನ್ನು ಮನೆ ಒಳಗೆ ತಂದು ಹಚ್ಕೋಬೇಡ''. ಇದಕ್ಕೆ ಮುಖ್ಯ ಕಾರಣವಾಗುವುದೇ ಮಹಿಳೆಯರ ಸಮಸ್ಯೆಗಳನ್ನು ಖಾಸಗಿಯಾಗಿಸುವುದು. ಮಹಿಳೆಯರ ಯಾವುದೇ ವಿಚಾರ ಮನೆಯೊಳಗಿನದು. ಅದು ಬಾಗಿಲು ದಾಟಿದರೆ ಸಾರ್ವಜನಿಕವಾಗುತ್ತದೆ ಮತ್ತು ಒಂದು ಸಾಮಾಜಿಕ ಸಮಸ್ಯೆಯಾಗಿ ಚರ್ಚಿಸಲಾಗುತ್ತದೆ. ಕೌಟುಂಬಿಕ ಹಿಂಸೆಯ ಪ್ರತಿಬಂಧಕ ಕಾಯ್ದೆ ಜಾರಿಯಲ್ಲಿದ್ದರೂ ಅದರಿಂದ ಮಹಿಳೆಯರಿಗೆ ಲಾಭವಿಲ್ಲ. ಯಾಕೆಂದರೆ ಖಾಸಗಿಯಾಗಿರುವ ಮಹಿಳೆಯರ ಸಮಸ್ಯೆಗಳು ಅಲ್ಲಿಂದ ಬಿಡುಗಡೆಯಾಗಿ ಇದೊಂದು ಕೌಟುಂಬಿಕ ಸಮಸ್ಯೆ ಮಾತ್ರವಲ್ಲ. ಇದೊಂದು ಇಬ್ಬರು ಮನುಷ್ಯರ ಸಂಬಂಧ ಎಂಬುದನ್ನು ಮೊದಲು ಸಾರ್ವಜನಿಕರೆಲ್ಲರು ಒಪ್ಪಿ ಅಂತರ್ಗತವಾಗಿರುವ ಖಾಸಗಿಯಾಗುವ ವಿಷಯದಿಂದ ಬಿಡುಗಡೆಯಾಗಬೇಕಾಗುತ್ತದೆ.



ಪುಸ್ತಕದ ಹೆಸರು: ಪದುಮ ಪುರುಷ
ಲೇ: ಎಚ್.ಆರ್. ಸುಜಾತಾ
ಪು: 95 ಬೆ: 140
ಪ್ರಕಾಶನ: ಕೌದಿ ಪ್ರಕಾಶನ
ಫೋನ್: 99720 89471

ಸಮಾಜದಲ್ಲಿ ಕಾಯ್ದೆಗಳನ್ನು ಅನುಷ್ಠಾನಗೊಳಿಸುವ ಕಾನೂನು ಪಾಲಕರು ಈ ಸಮಾಜದ ಪ್ರಜೆಗಳೇ ಆಗಿರುವುದರಿಂದ ಮಹಿಳೆಯರ ಮೇಲೆ ನಡೆಯುವ ಹಿಂಸೆಗೆ ಪರಿಹಾರವಿಲ್ಲ. ಆದರೆ, ಸ್ವತಃ ಮಹಿಳೆಯರೇ ಹಿಂಸೆಯಿಂದ ಬಿಡಿಸಿಕೊಳ್ಳುವ ಧೈರ್ಯ ಮಾಡುವುದು ಅಗತ್ಯ. ಸಂಯುಕ್ತ ಸಮೀನಾಳಾಗಿ ತನ್ನ ಮೂಲಕ್ಕೆ ತೆತ್ತುಕೊಂಡು ತವರ ಆಸರೆ ಮತ್ತು ಇತರರು ನೀಡುವ ಧೈರ್ಯದಿಂದ ತನ್ನ ಅಸ್ತಿತ್ವಕ್ಕಾಗಿ ಸೆಣಸಾಡತೊಡಗಿದಾಗ